ಇಂದು ದಿನಾಂಕ:*23.09.*2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ವಕೀಲರಿಂದಃ**

ನಾನು ಬೆಣಗಾಲ್ ಗ್ರಾಮದಲ್ಲಿ ವಾಸವಾಗಿರುವ ಬಗ್ಗೆ ರೇಷನ್ ಕಾರ್ಡ್ ಹಾಗೂ ಆಧಾರ್ ಕಾರ್ಡ್ ಇದೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ, ಸದರಿ ಪೋಟೋದಲ್ಲಿ ಇರುವ ಮನೆ ನಮ್ಮ ಮನೆ ಎಂದು ಒಪ್ಪಿಕೊಂಡ ಮೇರೆಗೆ ಸದರಿ ಪೋಟೋವನ್ನು ನಿಡಿ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಡಿಮಾಂಡ್ ರಿಜಿಸ್ಟರ್ ವಹಿಯನ್ನು ತೋರಿಸಿ ಕುಳ್ಳಮ್ಮ ಕೋಂ ತಿಮ್ಮಯ್ಯ ಎಂದು ಇದೆ ,ಆದರೆ ಅದು ಯಾರದ್ದು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕುಳ್ಳಮ್ಮ ಕೋಂ ತಿಮ್ಮಯ್ಯ ಯಾರು ಎಂದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ವಿಲ್ ನಲ್ಲಿ ಇರುವ ಕುಳ್ಳಮ್ಮ ಕೋಂ ತಿಮ್ಮಯ್ಯ ನನ್ನ ಅಜ್ಜಿ . ಬೆಣಗಾಲ್ ಗ್ರಾಮದ ಬೋವಿ ಕಾಲೋನಿಯಲ್ಲಿ ಕುಳ್ಳಮ್ಮ ಕೋಂ ತಿಮ್ಮಯ್ಯ ಎಂಬುವವರು ನಮ್ಮ ಅಜ್ಜಿ ಹೊರತುಪಡಿಸಿ ಬೇರೆ ಯಾರು ಇರುವುದಿಲ್ಲ. ನಿಪಿ 2 ರಲ್ಲಿ ಗುರುತಿಸಿರುವ ವಿಲ್ ಬರೆಯುವಾಗ ನಾನು ಇರಲಿಲ್ಲ ಅಥವಾ ಬೇರೆ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ವಿಲ್ ಬರೆಯುವ ಕಾಲಕ್ಕೆ ಕುಳ್ಳಮ್ಮರವರಿಗೆ ಎಷ್ಟು ವಯಸ್ಸು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಕುಳ್ಳಮ್ಮರವರನ್ನು ಉಪನೊಂದಣಾಧಿಕಾರಿ ಕಛೇರಿಗೆ ಯಾರು ಕರೆದುಕೊಂಡು ಹೋದರು ನನಗೆ ಗೊತ್ತಿಲ್ಲ. ಕುಳ್ಳಮ್ಮ ಒಬ್ಬರೇ ಬಸ್ಸು ಹತ್ತಿ ಓಡಾಡುವ ಶಕ್ತಿ ಇತ್ತು. ನನ್ನ ಅಜ್ಜಿ ಸತ್ತ ನಂತರ ತಿಥಿ ಮಾಡುವಾಗ ಬಟ್ಟೆಗಳನ್ನು ಹುಡುಕುತ್ತಿದ್ದಾಗ ವಿಲ್ ಸಿಕ್ಕಿದೆ. ನಿಪಿ 3 ರಲ್ಲಿ ಗುರುತಿಸಿರುವ ವಿಲ್ ನಾವು ಇದ್ದ ಮನೆಯಲ್ಲಿ ಸಿಕ್ಕಿತು. ನಾನು ಲಕ್ಷ್ಮಿಯವರ ಮನೆಯಲ್ಲಿ ವಾಸ ಇದ್ದೆ ಆ ಮನೆಯಲ್ಲಿ ವಿಲ್ ಸಿಕ್ಕಿದೆ. ವಿಲ್ ಲಕ್ಷ್ಮಿಯವರ ಮನೆಯಲ್ಲಿ ಸಿಕ್ಕಿರುವ ಬಗ್ಗೆ ವಾದ ಪತ್ರದಲ್ಲಿ ಬರೆಸಿಲ್ಲ. ಕುಮಾರ ಬಿನ್ ಚನ್ನಪ್ಪ ನನಗೆ ಗೊತ್ತಿದೆ. ಹರೀಶ ಬಿನ್ ಸಣ್ಣ ನಿಂಗನಾಯಕ ಗೊತ್ತಿಲ್ಲ.

ಪೂರ್ವ ಮತ್ತು ಪಶ್ಚಿಮಕ್ಕೆ ರಾಮಸ್ವಾಮಿಯವರ ಜಮೀನು, ಉತ್ತರಕ್ಕೆ ರಾಜೇಂದ್ರರವರ ಜಮೀನು ದಕ್ಷಿಣಕ್ಕೆ ನಾಚಮ್ಮ ರವರ ಜಮೀನು ಈ ಚಕ್ಕುಬಂದಿ ಒಳಗೆ ಇರುವ ಜಮೀನು ಯಾರದ್ದು ಎಂದು ಗೊತ್ತಿಲ್ಲ. ಬೆಣಗಾಲ್ ಗ್ರಾಮದ ಸರ್ವೆ ನಂ. 6 ಪಕ್ಕ ಪೋಡಿ ಆಗಿಲ್ಲ ಎಂದರೆ ಸರಿ . ಯಾವುದೇ ಪಕ್ಕ ಪೋಡಿ ಆಗದೇ ಇದ್ದುದರಿಂದ ಯಾರು ಯಾರು ಎಲ್ಲೆಲ್ಲಿ ಉಳುಮೆ ಮಾಡುತ್ತಾರೆ ಎಂದು ಹೇಳಲು ಸಾಧ್ಯ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ನಡುವೆ ದಾವಾ ನಡೆದಿರುವ ವಿಷಯ ನನಗೆ ಗೊತ್ತಿಲ್ಲ. ನಿಪಿ 5 ರಲ್ಲಿ ಗುರುತಿಸಿರುವ ದಾಖಲೆಯನ್ನು ನೀವು ಕೊಟ್ಟಿಲ್ಲವಾ ಎಂದರೆ ನಾನು ಸರಿಯಾಗಿ ನೋಡಿಲ್ಲ ಎಂದು ನುಡಿಯುತ್ತಾರೆ. ರಾಮಸ್ವಾಮಿ ಪ್ರತಿವಾದಿಗಳ ತಂದೆಯ ಅಕ್ಕ ಎಂದರೆ ಸುಳ್ಳು ಅವರು ನನ್ನ ಅಜ್ಜಿ. ಪ್ರತಿವಾದಿಗಳ ತಂದೆ ರಾಮಸ್ವಾಮಿ ಕುಳ್ಳಮ್ಮರವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಕಾರಣ ಕುಳ್ಳಮ್ಮರವರು ತಮ್ಮ ಆಸ್ತಿ ಅಂದರೆ ದಾವಾ ಆಸ್ತಿಯನ್ನು ದಿಃ 07-12-2006 ರಂದು ಪ್ರತಿವಾದಿಗಳ ತಂದೆ ರಾಮಸ್ವಾಮಿಗೆ ನೊಂದಾಯಿತ ವಿಲ್ ಮಾಡಿರುತ್ತಾರೆ ಎಂದರೆ ಸುಳ್ಳು. ಕುಳ್ಳಮ್ಮ ದಿಃ 14-10-2015 ರಲ್ಲಿ ಮರಣ ಹೊಂದಿದ್ದಾರೆ ಎಂದರೆ ಸರಿ. ಕುಳ್ಳಮ್ಮ ನನ್ನ ತಂದೆಗೆ ತಾಯಿಯಲ್ಲ ಹಾಗೂ ನನಗೆ ಅಜ್ಜಿ ಅಲ್ಲ ಎಂದರೆ ಸರಿಯಲ್ಲ. ಕುಳ್ಳಮ್ಮರವರನ್ನು ನನ್ನ ಅಜ್ಜಿ ಎಂದು ತೋರಿಸಲು ನ್ಯಾಯಾಲಯಕ್ಕೆ ಆರ್ ಡಿ ವಂಶವೃಕ್ಷ ಹಾಜರುಪಡಿಸಿಲ್ಲ ಎಂದರೆ ಸರಿ . ನಾನು ಕುಳ್ಳಮ್ಮರವರ ಮರಣ ದೃಢೀಕರಣ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ 4 ಫೋಟೋಗಳನ್ನು ತೋರಿಸಿ ಅದರಲ್ಲಿ ಕಂಡು ಬರುವ ಮನೆಗಳು ಪ್ರತಿವಾದಿ ತಂದೆ ರಾಮಸ್ವಾಮಿಯವರ ಅಕ್ಕ ಕುಳ್ಳಮ್ಮನವರಿಗೆ ಸೇರಿದ ದಾವಾ ಆಸ್ತಿ ಅಗಿರುತ್ತದೆ ಎಂದು ಕೇಳಿದ ಪ್ರಶ್ನೆಯನ್ನು ಸಾಕ್ಷಿ ನಿರಾಕರಿಸಿರುತ್ತಾರೆ, ಆದ್ದರಿಂದ ಸದರಿ ಫೋಟೋವನ್ನು ತೀರ್ಪಿನಲ್ಲಿ ಚರ್ಚಿಸುವ ಉದ್ದೇಶಕ್ಕಾಗಿ 4 ಫೋಟೋಗಳನ್ನು ಒಟ್ಟಾಗಿ ನಿಸಿ 1 ಎಂದು ಗುರುತಿಸಲಾಯಿತು. ನಿಸಿ 1 ರಲ್ಲಿ ಗುರುತಿಸಿರುವ ಪೊಟೋಗಳಲ್ಲಿರುವ ಮನೆಯಲ್ಲಿ ಈಗ ಪ್ರತಿವಾದಿಗಳು ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ನಿಸಿ 1 ರಲ್ಲಿ ಕಂಡು ಬರುವ ಮನೆಗಳಲ್ಲಿ ದಾವಾ ಆಸ್ತಿಯಲ್ಲಿ ಇರುತ್ತದೆ ಎಂದರೆ ಸುಳ್ಳು.

ಜಂಜರ್ ನಂ. 59 , ಸ್ವತ್ತಿನ ನಂ. 32 ಕ್ಕೆ ಸಂಬಂಧಿಸಿದ ಡಿಮಾಂಡ್ ಡಿಜಿಸ್ಟರ್ ವಹಿ ದಾವಾ ಆಸ್ತಿಗೆ ಸಂಬಂಧಿಸಿದೆ ಎಂದರೆ ಸುಳ್ಳು. ನಿಪಿ 2 ರಲ್ಲಿ ಗುರುತಿಸಿರುವ ವಿಲ್ ಹಾಗೂ ದಿಃ 07-12-2006 ರ ವಿಲ್ ಪತ್ರಗಳಿಗೆ ಸಂಬಂಧಿಸಿದಂತೆ ತಾಲ್ಲೂಕು ಕಛೇರಿಯಲ್ಲಿ ನನ್ನ ಮತ್ತು ಪ್ರತಿವಾದಿಗಳ ನಡುವೆ ವ್ಯಾಜ್ಯ ನಡೆದಿದೆ ಎಂದರೆ ಸರಿ . ಆ ಪ್ರಕರಣಕ್ಕೆ ಸಂಬಂಧಿಸಿದಂತೆ ತಹಸೀಲ್ದಾರ್ ಹಾಗೂ ರೆವಿನ್ಯೂ ಇನ್ ಪೆಕ್ಟರ್ ಗಳು ಸ್ಥಳ ತನಿಖೆ ಮಾಡಿ ಕುಳ್ಳಮ್ಮ ಯಾರ ಸಂಬಂಧಿ ಎಂದು ಖಚಿತಪಡಿಸಿಕೊಂಡು 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿದ್ದಾರೆ ಎಂದರೆ ಸುಳ್ಳು. ಕುಳ್ಳಮ್ಮ ಸಾಯುವ ತನಕ ಪ್ರತಿವಾದಿಗಳ ಜೊತೆ ದಾವಾ ಆಸ್ತಿಯಲ್ಲಿ ವಾಸ ಇದ್ದರೂ ಕುಳ್ಳಮ್ಮ ಮರಣವಾದ ನಂತರ ಅವರ ಉತ್ತರ ಕ್ರಿಯಾದಿಗಳನ್ನು ಪ್ರತಿವಾದಿಗಳೇ ಮಾಡಿದ್ದು , ಕುಳ್ಳಮ್ಮನವರ ಮರಣ ನಂತರ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಸ್ವಾಧೀನ ಮುಂದುವರೆಸಿದ್ದಾರೆ ಎಂದರೆ ಸುಳ್ಳು. ತಹಸೀಲ್ದಾರ್ ರವರು ಮಾಡಿದ ಆದೇಶದ ವಿರುದ್ಧ ಉಪ ವಿಭಾಗಾಧಿಕಾರಿಯವರ ಮುಂದೆ ಆರ್ ಎ 69/2022 ರಲ್ಲಿ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿ . ಸದರಿ ಮೇಲ್ಮನವಿಯಲ್ಲಿ ತಹಸೀಲ್ದಾರ್ ರವರ ಆದೇಶವನ್ನು ಎತ್ತಿ ಹಿಡಿದಿದ್ದಾರೆ ಎಂದರೆ ಸುಳ್ಳು. ಕುಳ್ಳಮ್ಮ ಯಾವ ಕಾಲದಲ್ಲೂ ನನ್ನ ಅಜ್ಜಿ ಆಗಿರಲಿಲ್ಲ , ಆದರೂ ಸಹ ನಾನು , ನನ್ನ ತಂದೆ ಮತ್ತು ಕೆಲವು ಸಾಕ್ಷಿಗಳು ಸೇರಿಕೊಂಡು ನಿಪಿ 2 ರಲ್ಲಿ ಇರುವ ವಿಲ್ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸುಳ್ಳು. ಕುಳ್ಳಮ್ಮ ನವರಿಗೆ ಕಣ್ಣು ಕಾಣಿಸುತ್ತಿರಲಿಲ್ಲ, ಕಿವಿ ಕೇಳಿಸುತ್ತಿರಲಿಲ್ಲ ಮತ್ತು ಓಡಾಡಲು ಆಗುತ್ತಿರಲಿಲ್ಲ ಅಂತಹ ಸಮಯದಲ್ಲಿ ದಾವಾ ಆಸ್ತಿಯನ್ನು ಕಬಳಿಸಲು ನಿಪಿ 2 ನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸುಳ್ಳು. ಹೇಗಾದರೂ ಮಾಡಿ ದಾವಾ ಆಸ್ತಿಗಳನ್ನು ಹೊಡೆದುಕೊಳ್ಳಬೇಕೆಂದು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**